# ‘ಶ್ರೀರಾಮಕೃಷ್ಣ ಲೀಲಾಪ್ರಸಂಗ’ – ಒಂದು ಪರಿಚಯ

ಸ್ವಾಮಿ ಸುಖಾತ್ಮಾನಂದ

**ಭ**ಗವಾನ್ ಶ್ರೀರಾಮಕೃಷ್ಣರ ಅತ್ಯಂತ ಅಧಿಕೃತ ಜೀವನಚರಿತ್ರೆಯೊಂದನ್ನು ಅವರ ಒಬ್ಬರು ಪ್ರತ್ಯಕ್ಷಶಿಷ್ಯರೇ ರಚಿಸಿದ್ದಾರೆ. ಈ ಬೃಹತ್ ಕೃತಿಯ ಹೆಸರು ‘ಶ್ರೀರಾಮಕೃಷ್ಣ ಲೀಲಾಪ್ರಸಂಗ’ ಎಂದು. ಅದರ ಕರ್ತೃ ಸ್ವಾಮಿ ಶಾರದಾನಂದಜಿ ಅವರು. ಬಂಗಾಳಿ ಭಾಷೆಯಲ್ಲಿ ಈ ಕೃತಿ ರಚಿತವಾಗಿದೆ. ರಾಮಕೃಷ್ಣ ಮಹಾಸಂಘದ ಬಂಗಾಳಿ ಭಾಷೆಯ ಮಾಸಪತ್ರಿಕೆಯಾದ ‘ಉದ್ಬೋಧನ’ದಲ್ಲಿ ೧೯೦೯ ರಿಂದ ೧೯೧೮ ರವರೆಗೆ ಇದು ಪ್ರಕಟವಾಯಿತು. ತದನಂತರ ಐದು ಭಾಗಗಳಲ್ಲಿ ಪುಸ್ತಕರೂಪದಲ್ಲಿ ಹೊರಬಂದಿತು. ಕೃತಿಯ ಲೇಖಕರು ಈ ಗ್ರಂಥದ ಬಗೆಗೆ ಹೀಗೆ ಹೇಳಿಕೊಳ್ಳುತ್ತಾರೆ: “.. ಕೇವಲ ಘಟನೆಗಳು ಮತ್ತು ಅವರು (ಶ್ರೀರಾಮಕೃಷ್ಣರು) ಈ ಸಮಯದಲ್ಲಿ ಎಸಗಿದ ಕಾರ್ಯಗಳು – ಇವಿಷ್ಟನ್ನೇ ನಿರೂಪಿಸಿ ನಾವು ಸುಮ್ಮನಾಗುವುದಿಲ್ಲ. ಯಾವ ಮಾನಸಿಕ ಭಾವದ ಮೂಲಕ, ಯಾವ ಉದ್ದೇಶವನ್ನು ಇಟ್ಟುಕೊಂಡು ಅವರು ಆ ಕಾರ್ಯವನ್ನು ಸಾಧಿಸಿದರು ಎಂಬುದನ್ನು ನಾವು ಇಲ್ಲಿ ವಿವರಿಸುವೆವು. ಏಕೆಂದರೆ ದೇಹ ಮನಸ್ಸುಗಳ ಸಂಕೀರ್ಣವಾದ ಮಾನವನ ಜೀವನ ಇತಿಹಾಸವು ಕೇವಲ ಅವನ ಬಾಹ್ಯ ಕ್ರಿಯಾಕಲಾಪಗಳಿಂದ ತಿಳಿಯುವುದಿಲ್ಲ. ಜಡವಾದಿಗಳಾದ ಪಾಶ್ಚಾತ್ಯರು ಜೀವನವನ್ನು ಮತ್ತು ಇತಿಹಾಸವನ್ನು ಬರೆಯುವಾಗ ಕೇವಲ ಬಾಹ್ಯ ಘಟನೆಗಳನ್ನು ಮಾತ್ರ ಹೇಳುತ್ತ ಹೋಗುತ್ತಾರೆ. ಆತ್ಮವಾದಿಗಳಾದ ಹಿಂದೂಗಳು ಬಾಹ್ಯ ಘಟನೆಗಳ ಹಿಂದಿರುವ ಮನೋಭಾವವನ್ನು ವಿವರಿಸುವುದರಲ್ಲಿ ತಮ್ಮ ನೈಪುಣ್ಯವನ್ನು ತೋರಿಸುವರು. ಇವೆರಡರ ಸಂಮಿಲನದಿಂದ ಉತ್ತಮ ಇತಿಹಾಸ ಅಥವಾ ಜೀವನಕಥೆ ಹೊರಬರುತ್ತದೆ ಎಂದು ನಾವು ಭಾವಿಸುತ್ತೇವೆ. ಮನಸ್ಸಿನ ಇತಿಹಾಸವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಬಾಹ್ಯ ಕಾರ್ಯಕಲಾಪಗಳನ್ನು ವಿವರಿಸಬೇಕು.” ಈ ಕಾರ್ಯವನ್ನೇ ಸ್ವಾಮಿ ಶಾರದಾನಂದರು ತಮ್ಮ ಅಪೂರ್ವ ಗ್ರಂಥದಲ್ಲಿ ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಆದ್ದರಿಂದಲೇ ಈ ಗ್ರಂಥವು ಬರಿಯ ಸಂಗತಿಗಳ ಅಥವಾ ಘಟನೆಗಳ ದಾಖಲೆಯಾಗಿ ಉಳಿಯದೆ, ಪಾಂಡಿತ್ಯಪೂರ್ಣ ವೈಚಾರಿಕ ವಿಶ್ಲೇಷಣೆಯನ್ನೂ, ಧರ್ಮವನ್ನು ಜೀವನದಲ್ಲಿ ಅನುಷ್ಠಾನಗೊಳಿಸುವ ಮಾರ್ಗಸೂಚಿಯನ್ನೂ ಒಳಗೊಂಡಿದೆ.

ಶ್ರೀರಾಮಕೃಷ್ಣರದು ಆಂತರಂಗಿಕ ಬದುಕು. ಇಂದ್ರಿಯಾತೀತ ನೆಲೆಯಲ್ಲಿ ಬಾಳಿದ ಬದುಕು. ಹಾಗೆಂದೇ ಅವರ ಜೀವನಚರಿತ್ರೆಯನ್ನು ರಚಿಸುವುದು ಬಹಳ ಕಷ್ಟ. ಅಂತಹ ಮಹಾನ್ ಕೃತಿಯಾದ ‘ಶ್ರೀರಾಮಕೃಷ್ಣ ಲೀಲಾ ಪ್ರಸಂಗ’ ದ ಪರಿಚಯವನ್ನು ಮಾಡಿಕೊಟ್ಟಿರುವ ಸ್ವಾಮೀಜಿಯವರು ತಮಿಳುನಾಡಿನ ಉದಕಮಂಡಲದಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರು.



‘ಶ್ರೀರಾಮಕೃಷ್ಣ ಲೀಲಾಪ್ರಸಂಗ’ ವು ಮಹಾನ್ ವ್ಯಕ್ತಿಯೊಬ್ಬನ ಅಧಿಕೃತ ಗ್ರಂಥವಾಗಿ ವಿಶಿಷ್ಟತೆಯನ್ನು ಪಡೆಯುತ್ತದೆ. ಆ ಮಹಾನ್ ವ್ಯಕ್ತಿಯು ಮಾನವತೆಯ ಪರಿಪೂರ್ಣತೆಯ ಅಭಿವ್ಯಕ್ತಿಯಾಗಿದ್ದಾರೆ; ಸರ್ವರಿಗೂ ದಯೆಯನ್ನು ತೋರುವ ಕರುಣಾಮೂರ್ತಿಯೂ, ಸಂಸಾರಬಂಧನದಲ್ಲಿ ಸಿಕ್ಕಿಹಾಕಿಕೊಂಡು, ನರಳಾಡುತ್ತಿರುವ ಮಾನವತೆಯ ಮೇಲೆ ಅನುಕಂಪವನ್ನು ತೋರುವ ದಯಾಮೂರ್ತಿಯೂ ಆಗಿ ಈ ಗ್ರಂಥದಲ್ಲಿ ಚಿತ್ರಿತರಾಗಿದ್ದಾರೆ. ಅವರು ಮನುಷ್ಯ ಮನುಷ್ಯರ ನಡುವಣ ಎಲ್ಲ ತೆರನ ಭೇದಭಾವಗಳನ್ನು ಕಿತ್ತು ನಿರ್ಮೂಲನ ಮಾಡಲು ಅವತರಿಸಿ ಬಂದ ಕಲ್ಯಾಣ ಮೂರ್ತಿ; ಪೂರ್ವಪಶ್ಚಿಮಗಳ ನಡುವೆ ಸಾಮರಸ್ಯವನ್ನುಂಟು ಮಾಡಲು ಧರೆಗಿಳಿದ ಸಮನ್ವಯಮೂರ್ತಿ; ಸ್ವಾಮಿ ವಿವೇಕಾನಂದರು ಉದ್ಘೋಷಿಸುವಂತೆ ಆಧುನಿಕ ಕಾಲದ ಆವಶ್ಯಕತೆಗಳನ್ನು ಪೂರೈಸುವ ಶ್ರೇಷ್ಠ ಅವತಾರಮೂರ್ತಿ.

ಶ್ರೀರಾಮಕೃಷ್ಣರ ಜೀವನವನ್ನು ವಸ್ತುನಿಷ್ಠವಾಗಿ ನಿರೂಪಿಸುವ ಬಯಕೆಯೇ ಈ ಕೃತಿಗೆ ಪ್ರೇರಣೆಯೆಂದು ಸ್ವಾಮಿ ಶಾರದಾನಂದಜಿ ಅವರು ಹೇಳುತ್ತಾರೆ. ಲಭ್ಯವಿರುವ ಕಾಲಮಾನಗಳೇ ಮೊದಲಾದ ಎಲ್ಲ ಬಗೆಯ ಮಾಹಿತಿಗಳನ್ನು ಅತ್ಯಂತ ವಿಶ್ವಾಸಾರ್ಹವಾದ ಆಕರಗಳಿಂದ ಸಂಗ್ರಹಿಸಿ, ಅವುಗಳನ್ನು ಅತ್ಯಂತ ಜತನದಿಂದ ಪರೀಕ್ಷಿಸಿ, ವಿಶ್ಲೇಷಿಸಿದ ಫಲಶ್ರುತಿಯೇ ಈ ಗ್ರಂಥವೆಂದು ಅವರು ತಿಳಿಸುತ್ತಾರೆ.

ಈ ಗ್ರಂಥದ ಮೊದಲ ಭಾಗದ ಹೆಸರು **‘ಪೂರ್ವಕಥೆ ಮತ್ತು ಬಾಲ್ಯಜೀವನ.’** ಇದರಲ್ಲಿ ಶ್ರೀರಾಮಕೃಷ್ಣರ ಉಗಮದ

ಐತಿಹಾಸಿಕ ಹಿನ್ನೆಲೆ ಮತ್ತು ಬಾಲ್ಯಜೀವನವನ್ನು ಚಿತ್ರಿಸಲಾಗಿದೆ. ಎರಡನೆಯ ಭಾಗವಾದ **'ಸಾಧಕಭಾವ'**ವು ಶ್ರೀರಾಮಕೃಷ್ಣರು ಮಾಡಿದ ಅನೇಕ ಸಾಧನೆಗಳನ್ನೂ, ಅವುಗಳ ವೈಶಿಷ್ಟ್ಯವನ್ನು ಮತ್ತು ಆ ಅವಧಿಯಲ್ಲಿ ಗುರುದೇವರು ಕೈಗೊಂಡ ಕಠಿಣ ತಪಸ್ಸು, ವ್ರತಾಚರಣೆಗಳನ್ನೂ, ಆ ಅವಧಿಯಲ್ಲಿ ಅವರ ಮನಸ್ಸು ದೇಹಗಳಲ್ಲಿ ಮೂಡಿಬಂದ ಭಾವಗಳನ್ನೂ, ಅವುಗಳ ಶಾಸ್ತ್ರೀಯ ವಿಶ್ಲೇಷಣೆಯನ್ನೂ ಸುದೀರ್ಘವಾಗಿ, ಪಾಂಡಿತ್ಯಪೂರ್ಣವಾಗಿ ವಿವರಿಸಲಾಗಿದೆ. ಶ್ರೀರಾಮಕೃಷ್ಣರ ಸಾಧನಾಗಾಥೆಯ ವಿವರಗಳು ನಮಗೆ ಇಲ್ಲಿ ತಿಳಿದುಬರುವಷ್ಟು ಇತರ ಅವತಾರಪುರುಷರ ಜೀವನಚರಿತ್ರೆಗಳಲ್ಲಿ ಕಂಡುಬರುವುದಿಲ್ಲ. ಗುರುದೇವರ ಸಾಧನಾಗಾಥೆಯು ಮಾನವ ದೃಷ್ಟಿಯಿಂದ, ಅತ್ಯಂತ ವಿಸ್ತಾರವಾಗಿ ಇಲ್ಲಿ ಕಾಣಬರುತ್ತದೆ.

ಸ್ವಾಮಿ ಶಾರದಾನಂದರು ಅವತಾರಪುರುಷರೂ ಕೂಡ ಸಾಧಾರಣ ಮಾನವರಂತೆಯೇ ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ ಎಂದು ಹೇಳುತ್ತಾರೆ. ಭಗವಂತನು ಮಾನವರೂಪದಲ್ಲಿ ನಡೆಸುವ ದಿವ್ಯಲೀಲೆಯ ಸಮಯದಲ್ಲಿ ಅವನು ಮಾನವರಂತೆಯೇ ವರ್ತಿಸುತ್ತಾನೆ ಮತ್ತು ಪುರುಷಪ್ರಯತ್ನದಿಂದಲೇ ಪರಿಪೂರ್ಣತೆಯನ್ನು ಸಾಧಿಸುತ್ತಾನೆ. ಅದಕ್ಕಾಗಿ ಅಗಾಧ ಸಾಹಸವನ್ನೂ ತಪಶ್ಚರ್ಯೆಯನ್ನೂ ಕೈಗೊಳ್ಳುತ್ತಾನೆ. ಅದಲ್ಲದೆ ಅವತಾರಪುರುಷರು ತಾವು ದೇಹಧಾರಿಗಳಾಗಿದ್ದಾಗ, ಸಾಧಾರಣ ಮಾನವರಂತೆ, ಮಾನವೀಯ ಭಾವನೆಗಳನ್ನೇ ಹೊಂದಿರುತ್ತಾರೆ. ಅವುಗಳ ಮೂಲಕವೇ ಸಾಧನಾಪಥದಲ್ಲಿ ಮುನ್ನಡೆದು ಜೀವನದ ಪರಮಾರ್ಥ ಗುರಿಯನ್ನು ತಲುಪುತ್ತಾರೆ. ಹೀಗೆ ಅವರು 'ಸಾಧನೆಯಿಂದಲೇ ಸಿದ್ಧಿ' ಎಂಬ ತಥ್ಯವನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟು, ಅವರಿಗೆ ಆದರ್ಶವಾಗಿ ನಿಲ್ಲುತ್ತಾರೆ.

ಈ ಪುಸ್ತಕದ ಮೂರನೆಯ ಮತ್ತು ನಾಲ್ಕನೆಯ ಭಾಗಗಳು ಶ್ರೀರಾಮಕೃಷ್ಣರ **'ಗುರುಭಾವ'** ವನ್ನು ವರ್ಣಿಸುತ್ತವೆ. ಶ್ರೀರಾಮಕೃಷ್ಣರು ತಮ್ಮ ಸಾಧನೆಯಲ್ಲಿ ಸಿದ್ಧಿಯನ್ನು ಗಳಿಸಿದ ನಂತರ ಈ ಭಾವವನ್ನು ತಳೆದರು. ಇಲ್ಲಿ ಅವರ ಅನೇಕಾನೇಕ ಭಾವಗಳು, ಆ ಭಾವಗಳಿಂದ ಪ್ರೇರಿತವಾದ ಕಾರ್ಯಗಳು ಹಾಗೂ ಅವುಗಳ ಹಿಂದಿನ ಉದ್ದೇಶಗಳು ಇವುಗಳೆಲ್ಲವನ್ನೂ ವಿವರವಾಗಿ ವಿಶ್ಲೇಷಿಸಿರುವುದನ್ನು ನಾವು ಕಾಣುತ್ತೇವೆ. ಈ ಎಲ್ಲ ವಿಷಯಗಳನ್ನೂ ಸ್ವಾಮಿ ಶಾರದಾನಂದರು ಪುರಾತನ ಶಾಸ್ತ್ರಗ್ರಂಥಗಳ ಬೆಳಕಿನಲ್ಲಿ ಚರ್ಚಿಸುತ್ತಾರೆ. ಈ ಸಂದರ್ಭದಲ್ಲಿಯೇ ಶ್ರೀರಾಮಕೃಷ್ಣರ ಸುವಿಖ್ಯಾತ ಉಕ್ತಿಯಾದ 'ಎಷ್ಟು ಮತಗಳೋ ಅಷ್ಟು ಪಥಗಳು' ಎಂಬ ಮಾತಿನ ಮಹತ್ವವನ್ನು ಪಾಂಡಿತ್ಯಪೂರ್ಣವಾಗಿ ವಿವರಿಸಲಾಗಿದೆ. ಅದಲ್ಲದೆ ಇಲ್ಲಿ ಶ್ರೀರಾಮಕೃಷ್ಣರ 'ಭಾವಮುಖಿ' ವೆಂಬ ಅಪೂರ್ವ ಮಾನಸಿಕ ಸ್ಥಿತಿ ಮತ್ತು ಗುರುವಾಗಿ ಶ್ರೀರಾಮಕೃಷ್ಣರು ಪ್ರಕಟಪಡಿಸಿದ ಹಲವು ಭಾವತರಂಗಗಳನ್ನು ನಾವು ತಿಳಿದುಕೊಳ್ಳಬಹುದು.

ಐದನೆಯ ಭಾಗದಲ್ಲಿ ಶ್ರೀರಾಮಕೃಷ್ಣರು **'ದಿವ್ಯಭಾವ'** ದಲ್ಲಿ ನೆಲೆನಿಂತ ಬಗೆಯನ್ನು ವರ್ಣಿಸಲಾಗಿದೆ. ಈ ಭಾವದಲ್ಲಿ ಅವರು ತಮ್ಮ ಪ್ರಮುಖ ಶಿಷ್ಯನಾದ ನರೇಂದ್ರನ ಜೊತೆಗೆ ಇರಿಸಿಕೊಂಡಿದ್ದ ಅಪೂರ್ವ ಪ್ರೇಮಪೂರಿತ ಸಂಬಂಧವನ್ನು ಅತ್ಯಂತ ಹೃದಯಂಗಮವಾಗಿ ಇಲ್ಲಿ ಬಣ್ಣಿಸಲಾಗಿದೆ. ಶ್ರೀರಾಮಕೃಷ್ಣರ ಅವತಾರಕಾಲದ ಕಡೆಯ ಹನ್ನೆರಡು ವರ್ಷಗಳ ಅವಧಿಯ ಈ ಕಾಲಘಟ್ಟವು ಅತ್ಯಂತ ಪ್ರಮುಖವಾದುದು. ಇದಕ್ಕಿರುವ ಕೆಲವು ಕಾರಣಗಳು ಹೀಗಿವೆ: ೧. ಶ್ರೀರಾಮಕೃಷ್ಣರು ಈ ಕಾಲದಲ್ಲಿ ತಮ್ಮ ಆಧ್ಯಾತ್ಮಿಕ ಅನುಯಾಯಿಗಳ ವ್ಯಕ್ತಿತ್ವವನ್ನು ರೂಪಿಸಿದರು. ೨. ಕೇಶವಚಂದ್ರ ಸೇನ, ವಿಜಯಕೃಷ್ಣ ಗೋಸ್ವಾಮಿ ಮುಂತಾದ ಧಾರ್ಮಿಕ ಮುಖಂಡರಿಗೆ ಮಾರ್ಗದರ್ಶನ ನೀಡಿ, ಅವರು ಹೊಸ ಬೆಳಕು ಕಂಡುಕೊಳ್ಳುವಂತೆ ಮಾಡಿದರು. ೩. ತಮ್ಮ ಬಳಿಗೆ ಬಂದ ಎಲ್ಲ ಜಿಜ್ಞಾಸುಗಳ ಆಧ್ಯಾತ್ಮಿಕ ದಾಹವನ್ನು ತಣಿಸಿದರು. ೪. ಆಯ್ದ ಕೆಲವು ಶಿಷ್ಯರನ್ನು ತೀವ್ರ ಆಧ್ಯಾತ್ಮಿಕ ಸಾಧನೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿದರು; ಆ ಮೂಲಕ ಅವರು ಭವಿಷ್ಯದಲ್ಲಿ ತ್ಯಾಗ ಮತ್ತು ಸೇವೆಗಳೇ ಆದರ್ಶವಾಗುಳ್ಳ ಸಂನ್ಯಾಸೀ ಜೀವನವನ್ನಪ್ಪುವಂತೆ ಪ್ರೇರೇಪಿಸಿದರು. ಇದರಿಂದಾಗಿ ಮುಂದಿನ ದಿನಗಳಲ್ಲಿ ತಾವು ತಮ್ಮ ಜೀವನದಲ್ಲಿ ಬೋಧಿಸಿ ತೋರಿಸಿದ ವಿಶಿಷ್ಟವೂ, ಉದಾರವೂ ಆದ ಭಾವನೆಗಳ ಪ್ರಸಾರಕ್ಕೆ ಅನುವು ಮಾಡಿಕೊಟ್ಟರು. ೫. ನೂರಾರು ಗೃಹೀ ಭಕ್ತರ ಮತ್ತು ಅವರ ಕುಟುಂಬಗಳ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ, ಚೈತನ್ಯವನ್ನು ತುಂಬಿದರು. ೬. ಭಕ್ತರು ಮತ್ತು ಯುವ ಶಿಷ್ಯರುಗಳನ್ನು ತಮ್ಮ ದಿವ್ಯಪ್ರೇಮದಿಂದ ಕಟ್ಟಿಹಾಕಿ ಮಧುರಬಾಂಧವ್ಯ ಉಂಟಾಗುವಂತೆ ಮಾಡಿದರು. ಇದೇ ಮುಂದೆ ರಾಮಕೃಷ್ಣ ಮಹಾಸಂಘವೆಂಬ ಸಂಸ್ಥೆಯ ಸ್ವರೂಪವನ್ನು ಪಡೆಯಿತು.

ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಬೆಳಕಿನಲ್ಲಿ ಅವತಾರ ತತ್ತ್ವವನ್ನು ವಿಶದವಾಗಿ ವಿವರಿಸಿರುವುದು ಶ್ರೀರಾಮಕೃಷ್ಣ ಲೀಲಾಪ್ರಸಂಗದ ಒಂದು ಪ್ರಮುಖ ಅಂಶ. ಇದರ ಪ್ರಕಾರ ಅವತಾರವೆಂಬುವುದು ಭಗವಚ್ಛಕ್ತಿಯ ಪ್ರಕಟಣವೇ ಆಗಿದೆ. ಈ ಅಭಿವ್ಯಕ್ತಿಯು ಮಾನವ ರೂಪವನ್ನು ತಳೆದು, ಮಾನವೀಯ ಗುಣಗಳನ್ನು ಪಡೆದುಕೊಂಡಿರುತ್ತದೆ. ಸ್ವಾಮಿ ಶಾರದಾನಂದರ ಪ್ರಕಾರ ಅವತಾರ ಕಾರ್ಯದ ಉದ್ದೇಶಗಳು ಹೀಗಿವೆ: ೧. ಪರಮತತ್ತ್ವದ ನೈಜ ಸ್ವರೂಪವನ್ನು ಮಾನವತೆಗೆ ಪ್ರಕಟಗೊಳಿಸುವುದು. ೨. ಅವತಾರ ಪುರುಷರು, ಭಗವಚ್ಛಕ್ತಿಯ ಉನ್ನತ ಅಭಿವ್ಯಕ್ತಿಗಳಾದ್ದರಿಂದ, ಎಲ್ಲರಿಗೂ ಪೂಜಾರ್ಹರೂ, ಗೌರವಕ್ಕೆ ಪಾತ್ರರೂ ಆಗಿರುತ್ತಾರೆ. ೩. ಅವರ ಸಂಪೂರ್ಣ ಜೀವನ ಮತ್ತು ಕಾರ್ಯಗಳು ಜಗತ್ಕಲ್ಯಾಣಕ್ಕಾಗಿ ಮುಡಿಪಾಗಿರುತ್ತವೆ. ೪. ಅವರು ಸಾಧಕರಿಗೆ ಭಗವತ್ಸಾಕ್ಷಾತ್ಕಾರದ ಮತ್ತು ಆಧ್ಯಾತ್ಮಿಕ ಜೀವನದ ವಿವಿಧ ವಿಧಿವಿಧಾನಗಳನ್ನು ಪರಿಚಯಿಸುತ್ತಾರೆ. ೫. ನಾವು ದೇವರು ಎಂದು ಸಾಧಾರಣವಾಗಿ ಕರೆಯುವ ಭಗವಂತನ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಅವತಾರಪುರುಷರು ಜನರಲ್ಲಿ ಬಿತ್ತುತ್ತಾರೆ. ಆ ಮೂಲಕ ಮಾನವತೆಯ ದಿವ್ಯಪ್ರೇಮ, ಭಕ್ತಿ ಮತ್ತು ಆರಾಧನೆಗಳನ್ನು ಭಗವಂತನಲ್ಲಿ ಬೆಳೆಸಿಕೊಳ್ಳಲು ಪ್ರೋತ್ಸಾಹಿಸುತ್ತಾರೆ. ೬. ನಿಸ್ಪೃಹ

ಸಾಧಕರ ಹೃದಯಗಳಲ್ಲಿ ದಿವ್ಯಾತ್ಮ ಮತ್ತು ಪರಮಾತ್ಮನ ಅಭಿವ್ಯಕ್ತಿಯನ್ನು ಉದ್ದೀಪನಗೊಳಿಸುತ್ತಾರೆ. ೭. ಜಗದ್ಗುರುವಾಗಿ ತಮ್ಮ ಶಿಷ್ಯರು ಮತ್ತು ಅನುಯಾಯಿಗಳಿಗೆ ಭಗವನ್ಮಯವಾದ ಜೀವನವನ್ನು ಪರಿಚಯಿಸಿ, ಸನ್ಮಾರ್ಗದಲ್ಲಿ ತೊಡಗಿಸುತ್ತಾರೆ. ೮. ಸಾಮಾನ್ಯ ಜನರ ಮಟ್ಟಕ್ಕೆ ಕೆಳಗಿಳಿದು ಬಂದು, ಅತ್ಯಂತ ವಿನಯಶಾಲಿಗಳಾಗಿ ವರ್ತಿಸುತ್ತ, ಅಹಂಕಾರ, ಮದ, ಸ್ವಪ್ರತಿಷ್ಠೆಗಳಿಂದ ಬೀಗುತ್ತಿರುವ ಜನರಿಗೆ ಸರಳತೆಯ ಹಾಗೂ ವಿನಯಶೀಲತೆಯ ಪಾಠವನ್ನು ಹೇಳಿಕೊಡುತ್ತಾರೆ. ಇವುಗಳೇ ಸಾಧಕನ ವ್ಯಕ್ತಿತ್ವದ ಸಾರತತ್ತ್ವವೆಂದು ಅವರಿಗೆ ಮನಗಾಣಿಸುತ್ತಾರೆ. ಹೀಗೆ ಅವತಾರಪುರುಷರು ತಮ್ಮ ದಿವ್ಯಕಾರ್ಯಗಳ ಮೂಲಕ ಈ ಭುವಿಯೆಡೆಗೇ ಸ್ವರ್ಗಸಾಮ್ರಾಜ್ಯವನ್ನು ತರುತ್ತಾರೆ.

ಭಕ್ತರಿಗೆ ಅವತಾರಪುರುಷರ ಅದ್ಭುತ ಕಾರ್ಯಗಳೆಲ್ಲವೂ ಲೀಲೆಗಳಂತೆಯೇ ತೋರುತ್ತವೆ. ಇವುಗಳು ಸಾಧಕನೊಬ್ಬನು ತನ್ನ ಸಾಧನಾಮಾರ್ಗದಲ್ಲಿ, ಗುರಿ ತಲುಪಲು ಹೇಗೆ ಸಹಾಯ ಮಾಡುತ್ತವೆ ಎಂಬ ಪ್ರಶ್ನೆಗೆ ಉತ್ತರವನ್ನು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಕೊಡುತ್ತಾನೆ:

ಜನ್ಮಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥

"ನನ್ನ ದಿವ್ಯವಾದ ಕರ್ಮ ಮತ್ತು ಜನ್ಮಗಳನ್ನು ಯಾರು ಯಥಾವತ್ತಾಗಿ ತಿಳಿದುಕೊಂಡಿರುತ್ತಾರೋ, ಅವರು ತಮ್ಮ ಶರೀರವನ್ನು ತ್ಯಜಿಸಿದ ಮೇಲೆ ಮತ್ತೆ ಪುನರ್ಜನ್ಮವನ್ನು ಪಡೆಯುವುದಿಲ್ಲ. ಹೇ ಅರ್ಜುನ! ಅವರು ನನ್ನನ್ನೇ ಹೊಂದುತ್ತಾರೆ." (೪.೯)

ಅವತಾರವೆಂದರೆ ಒಂದೇ ವ್ಯಕ್ತಿಯಲ್ಲಿ ದೈವೀ ಹಾಗೂ ಮಾನವೀಯ ಗುಣಗಳ ಅಪೂರ್ವ ಸಂಗಮವಾಗುವುದು. ಅವತಾರ ಪುರುಷರ ಮುಖ್ಯ ಕಾರ್ಯವೆಂದರೆ, ಮಾನವನ ಕೀಳು ಪ್ರವೃತ್ತಿಯನ್ನು ನಿರ್ಮೂಲ ಮಾಡಿ, ಅವನ ಉನ್ನತ ಅಥವಾ ದೈವೀ ಸ್ವಭಾವವು ಅತ್ಯಂತ ಸ್ಪಷ್ಟವಾಗಿ ಪ್ರಕಟವಾಗುವಂತೆ ಮಾಡುವುದು.

ಈ ಎಲ್ಲ ಕಾರ್ಯಗಳನ್ನು, ಹಾಗೆಯೇ ಇನ್ನೂ ಹಲವಾರು ಅದ್ಭುತ ಕಾರ್ಯಗಳನ್ನು ಶ್ರೀರಾಮಕೃಷ್ಣರು ತಮ್ಮ ಜೀವಿತದಲ್ಲಿ ಮಾಡಿತೋರಿಸಿದರು. ಹಿಂದಿನೆಲ್ಲ ಅವತಾರಗಳಿಗಿಂತ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಲೋಕದ ಆಧ್ಯಾತ್ಮಿಕ ಚೈತನ್ಯದ ಜಾಗೃತಿಯ ಮಹಾಕಾರ್ಯ ಅವರ ಮೂಲಕ ನಡೆಯಿತು. ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿ ಬಣ್ಣಿಸಿರುವ ಅವರ ಜೀವನವು ಪರಮಾತ್ಮನು ಭಗವದ್ಗೀತೆಯಲ್ಲಿ ಕೊಟ್ಟ ಆಶ್ವಾಸನೆಯನ್ನು ಪೂರ್ಣಗೊಳಿಸಿದ್ದಕ್ಕೆ ನಿದರ್ಶನವೆಂಬಂತೆ ಇದೆ. ಶ್ರೀರಾಮಕೃಷ್ಣರ ಜನ್ಮಕ್ಕೆ ಮುಂಚೆ ಅವರ ತಂದೆತಾಯಿಯರಿಗಾದ ದಿವ್ಯಾನುಭವಗಳು, ಬಾಲ್ಯದ ಭಾವ, ಸಾಧನೆಯ ಕಾಲದ ಅನುಭವಗಳು – ಇವುಗಳೆಲ್ಲದರಲ್ಲಿ ಭಗವಚ್ಛಕ್ತಿಯ ಪ್ರಖರ ಪ್ರಕಾಶನವನ್ನು, ಅವತಾರ ಕಾರ್ಯದ ಸುಸಂಪನ್ನತೆಯನ್ನು ನಾವು ಕಾಣುತ್ತೇವೆ. ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದ ಎಲ್ಲರೂ, ಅವರು ಸಾಧಕರಾಗಿರಲಿ, ಅವರ ಸಾಧನಾಪಥದಲ್ಲಿ ಸಹಾಯ ಮಾಡಿದ ಗುರುಗಳೇ ಆಗಿರಲಿ ಅಥವಾ ಶಿಷ್ಯರು ಮತ್ತು ಭಕ್ತರಾಗಿರಲಿ, ಅವರಿಂದ ಅಧ್ಯಾತ್ಮದ ಹೊಸ ಬೆಳಕೊಂದನ್ನು ಪಡೆದುಕೊಂಡದ್ದು ನಿರ್ವಿವಾದ. ಅವರು ಹೋದೆಡೆಯೆಲ್ಲ, ಜನರು ಭಗವದ್ವಿಭೂತಿಯ ಅಪ್ರತಿಮ ಪ್ರಕಾಶವನ್ನು ಅವರಲ್ಲಿ ಕಂಡುಕೊಂಡರು. ಅವರ ಅಂತಿಮ ದಿನಗಳನ್ನು ಕಳೆದ ಶ್ಯಾಮಪುಕುರ ಮತ್ತು ಕಾಶೀಪುರದ ಉದ್ಯಾನವನಗಳಲ್ಲಂತೂ, ಅವರ ಕರುಣೆ ಮತ್ತು ಅನುಕಂಪಗಳು ಎಲ್ಲರ ಮೇಲೂ ಸಂಪೂರ್ಣವಾಗಿ ಅಯಾಚಿತವಾಗಿ ಹರಿದದ್ದನ್ನು ನಾವು ಕಾಣುತ್ತೇವೆ. ಅವರು ತಮ್ಮ ಭೌತಿಕ ದೇಹವನ್ನು ತ್ಯಜಿಸಿದ ನಂತರವೂ ಅವರ ಪ್ರಭಾವವು ಮತ್ತೂ ಶಕ್ತಿಶಾಲಿಯಾಗಿ, ಆಕರ್ಷಕವಾಗಿ ವಿಶ್ವದೆಲ್ಲೆಡೆ ಹಬ್ಬುತ್ತಿದೆ, ಮುಂದೆಯೂ ಅವ್ಯಾಹತವಾಗಿ ಹಬ್ಬುವುದು.

ಇಂತಹ ಮಹಾನ್ ಕೃತಿಯನ್ನು ಬರೆಯುವುದಕ್ಕೆ ಹಲವು ಕಾರಣಗಳನ್ನು ಲೇಖಕರು ಹೇಳಿಕೊಂಡಿದ್ದಾರೆ. ಅವುಗಳಲ್ಲಿ ಕೆಲವು ಲೌಕಿಕವಾದುವು: ೧. ಶ್ರೀಶಾರದಾದೇವಿಯವರಿಗಾಗಿ ಕೊಲ್ಕತಾದಲ್ಲಿ ಒಂದು ಮನೆಯನ್ನು ಕಟ್ಟಲು ಬೇಕಾಗುವ ಹಣಕ್ಕಾಗಿ. ೨. ಆಗ ತಾನೇ ಆರಂಭವಾಗಿದ್ದ 'ಉದ್ಬೋಧನ' ಪತ್ರಿಕೆಯ ಪ್ರಕಟಣೆಗಾಗಿ ಹಣವನ್ನು ಸಂಗ್ರಹಿಸಲು. ಸ್ವಾಮಿ ಶಾರದಾನಂದರಂತಹ ಮಹಾ ಅನುಭಾವಿಗಳು ಇಂತಹ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿದ್ದರು ಎನ್ನುವುದು ಅತ್ಯಂತ ಖೇದಕರ ಸಂಗತಿ. ಅದಲ್ಲದೆ, ಶ್ರೀರಾಮಕೃಷ್ಣರ ಬಗೆಗೆ ಒಂದು ಅಧಿಕೃತವಾದ ಜೀವನಚರಿತ್ರೆಯ ಆವಶ್ಯಕತೆಯೂ ಇತ್ತು. ಆ ಹೊತ್ತಿಗಾಗಲೇ ಅನೇಕ ಚರಿತ್ರೆಗಳು ಪ್ರಕಟವಾಗಿದ್ದರೂ ಅವುಗಳಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಸಾಧನೆಗಳ ಪರಿಪೂರ್ಣ ಮತ್ತು ಪ್ರಾಮಾಣಿಕ ಚಿತ್ರಣ ದೊರಕುತ್ತಿರಲಿಲ್ಲ. ಈ ಕೊರತೆಯನ್ನು ನೀಗಲು ಸ್ವಾಮಿ ಶಾರದಾನಂದಜಿ ಅವರು ಶ್ರೀರಾಮಕೃಷ್ಣರ ಸಮಗ್ರ ಜೀವನವನ್ನು ಮತ್ತು ಅವರ ದಿವ್ಯಲೀಲೆಯ ವಿಮರ್ಶಾತ್ಮಕ ಅಧ್ಯಯನವನ್ನು ಮಾಡಲು ಸಂಕಲ್ಪಿಸಿದರು ಹಾಗೂ ಅದರಲ್ಲಿ ಯಶಸ್ವಿಯೂ ಆದರು.

ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ದೇವರು, ಮನುಷ್ಯ, ಜಗತ್ತು, ಧರ್ಮ, ಅಧ್ಯಾತ್ಮ ಮತ್ತು ಅವುಗಳಿಗೆ ಸಂಬಂಧಪಟ್ಟ ಸಂಗತಿಗಳನ್ನು ಅವತಾರಪುರುಷರ ಜೀವನ ಮತ್ತು ಬೋಧನೆಗಳ ಮೂಲಕ ನಿಖರವಾಗಿ ಅರಿತುಕೊಳ್ಳಬಹುದು" ಎಂದು. ಇಂತಹ ಅದ್ಭುತ ಚರಿತ್ರೆಯೊಂದನ್ನು ಆಧುನಿಕರ ಮುಂದೆ ಶ್ರೀರಾಮಕೃಷ್ಣ ಲೀಲಾಪ್ರಸಂಗವು ಪ್ರಸ್ತುತ ಪಡಿಸುತ್ತದೆ. ಇದು ಇಂದಿನ ಕಾಲಕ್ಕಲ್ಲದೆ, ಮುಂದಿನ ದಿನಮಾನಗಳಲ್ಲೂ ಓದುಗರ ಮೇಲೆ ಗಾಢ ಪ್ರಭಾವವನ್ನು ಬೀರುವುದು. ಆದ್ದರಿಂದ ಈ ಗ್ರಂಥವನ್ನು ಅವಶ್ಯವಾಗಿ ಅಧ್ಯಯನ ಮಾಡಬೇಕು.

(ಮೈಸೂರು ಶ್ರೀರಾಮಕೃಷ್ಣ ಆಶ್ರಮವು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದ ಕನ್ನಡ ಅವತರಣಿಕೆಯನ್ನು ಈಗಾಗಲೇ ಪ್ರಕಟಿಸಿದೆ. ಎರಡು ಭಾಗಗಳಲ್ಲಿ ಇರುವ ಇದರ ಒಟ್ಟು ಬೆಲೆ ರೂ. ೨೦೦/–)